DECEMBER 13,2024
ALL INDIA RADIO- DHARWAD
PRADESH SAMACHARA (KANNADA) 12PM

<><><>

ಆಕಾಶವಾಣಿ

ಪ್ರದೇಶ ಸಮಾಚಾರ

ಓದಿದವವರು: ವಿವೇಕಾದಿತ್ಯ ಕನಿಯಾಲ

<><><>

ಪ್ರಸಕ್ತ 2024 ರಲ್ಲಿ, ರಾಜ್ಯಾದ್ಯಂತ 5 ಸಾವಿರದ 870 ಲೈಂಗಿಕ ದೌರ್ಜನ್ಯ ಹಾಗೂ 3 ಸಾವಿರದ 400 ಪೋಕ್ಸೊ ಪ್ರಕರಣಗಳು, ದಾಖಲಾಗಿವೆ ಎಂದು, ಗೃಹ ಖಾತೆ ಸಚಿವ ಜಿ.ಪರಮೇಶ್ವರ ತಿಳಿಸಿದ್ದಾರೆ. ವಿಧಾನ ಪರಿಷತ್ತಿನಲ್ಲಿ ಶಾಸಕ ಎಸ್. ರವಿಕುಮಾರ ಅವರ ಚುಕ್ಕೆ ಗುರುತಿನ ಪ್ರಶ್ನೆಗೆ ಉತ್ತರಿಸಿ, ರಾಜ್ಯಾದ್ಯಂತ ಅಪರಾಧ ಪ್ರಕರಣಗಳ ನಿಯಂತ್ರಣಕ್ಕೆ, ವಿವಿಧ ಸ್ಥಳಗಳಲ್ಲಿ, 5 ಲಕ್ಷ ಕ್ಯಾಮೆರಾಗಳನ್ನು ಅಳವಡಿಸಲಾಗಿದೆ ಎಂದರು. 'ಡಿಜಿಟಲ್ ಅರೆಸ್ಟ್' ವಂಚನೆ ಪ್ರಕರಣಗಳ ಬಗ್ಗೆ, ಶಾಸಕ ಕೆ. ಪ್ರತಾಪಸಿಂಹ ನಾಯಕ ಅವರ, ಚುಕ್ಕೆ ಗುರುತಿನ ಪ್ರಶ್ನೆಗೆ, ಗೃಹ ಖಾತೆ ಸಚಿವರು ಉತ್ತರಿಸಿ, ಈ ವರೆಗೆ ರಾಜ್ಯದಲ್ಲಿ ಒಟ್ಟು 641 ಡಿಜಿಟಲ್ ಅರೆಸ್ಟ್ ವಂಚನೆ ಪ್ರಕರಣಗಳು ದಾಖಲಾಗಿವೆ. 109 ಕೋಟಿ ರೂಪಾಯಿ ವಂಚನೆ ಆಗಿದೆ. ಆ ಪೈಕಿ, 9 ಕೋಟಿ 45 ಲಕ್ಷ ರೂಪಾಯಿಗಳನ್ನು ವಶಪಡಿಸಿಕೊಳ್ಳಲಾಗಿದೆ. 27 ಆರೋಪಿಗಳನ್ನು ಬಂಧಿಸಲಾಗಿದೆ ಎಂದು, ವಿಧಾನ ಪರಿಷತ್ತಿಗೆ ತಿಳಿಸಿದರು.

<><><>

ಬಳ್ಳಾರಿಯ ಜಿಲ್ಲಾ ಆಸ್ಪತ್ರೆ ಹಾಗೂ ಬಿಮ್ಸ್‌ನಲ್ಲಿ ನಾಲ್ವರು ಬಾಣಂತಿಯರು, ಮೃತಪಟ್ಟ ಘಟನೆ ಹಿನ್ನೆಲೆ, ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ, ನಾಗಲಕ್ಷ್ಮೀ ಚೌಧರಿ ಅವರು, ಬಳ್ಳಾರಿಗೆ ಭೇಟಿ ನೀಡಿ, ಪರಿಶೀಲಿಸಿದರು. ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ತುಮಕೂರು, ರಾಯಚೂರು, ಹುಬ್ಬಳ್ಳಿ ಸೇರಿದಂತೆ, ವಿವಿಧೆಡೆ ಬಾಣಂತಿಯರ ಸಾವು ಕಳವಳಕಾರಿಯಾಗಿದೆ. ಶೈಶವಾವಸ್ಥೆ ಮಕ್ಕಳ ಪೋಷಣೆ, ಪಾಲನೆ ಮತ್ತು ಭವಿಷ್ಯದ ದೃಷ್ಟಿಯಿಂದ, ಸರ್ಕಾರದ ವತಿಯಿಂದ ಪರಿಹಾರ ಹೊರತು ಪಡಿಸಿ, ಇನ್ನಿತರ ಸವಲತ್ತುಗಳನ್ನು ನೀಡಲು, ಮುಖ್ಯಮಂತ್ರಿ ಅವರೊಂದಿಗೆ ಚರ್ಚಿಸುವುದಾಗಿ, ಅವರು ಹೇಳಿದರು. ಇಂದು ಅವರು ವಿಮ್ಸ್ ಆಸ್ಪತ್ರೆಗೆ ಭೇಟಿ ನೀಡಿ, ಪರಿಶೀಲಿಸುವುದಾಗಿ ಹೇಳಿದರು.

<><><>

ಅನುದಾನ ರಹಿತ ಸಂಸ್ಥೆಗಳ ಶಿಕ್ಷಕರು ಎದುರಿಸುತ್ತಿರುವ ಜ್ವಲಂತ ಸಮಸ್ಯೆಗಳ ಬಗ್ಗೆ ಹಾಗೂ 1995 ರ ನಂತರ ಆರಂಭವಾದ ಕನ್ನಡ ಮಾಧ್ಯಮ ಶಾಲಾ–ಕಾಲೇಜುಗಳ ಬೋಧಕ ಸಿಬ್ಬಂದಿಯ ಅನುದಾನವನ್ನು ವಿಸ್ತರಿಸುವ ಕುರಿತು, ಬೆಳಗಾವಿಯ ಸುವರ್ಣ ಸೌಧದ ಎದುರು ನಡೆದ ಹೋರಾಟದಲ್ಲಿ ಸಾವಿರಾರು ಶಿಕ್ಷಕರು ಭಾಗವಹಿಸಿ, ಸರ್ಕಾರಕ್ಕೆ ಮನವಿ ಸಲ್ಲಿಸಿದರು. ಸರ್ಕಾರದ ಪರವಾಗಿ ರಾಜ್ಯ ಕಾರ್ಮಿಕ ಸಚಿವ ಸಂತೋಷ್ ಲಾಡ್ ಅವರು ಮನವಿ ಸ್ವೀಕರಿಸಿ, ಮುಖ್ಯಮಂತ್ರಿಗಳ ಜೊತೆ ಚರ್ಚಿಸುವುದಾಗಿ ತಿಳಿಸಿದರು. ವಿಧಾನ ಪರಿಷತ್ ಸದಸ್ಯರುಗಳಾದ ಎಸ್.ವಿ. ಸಂಕನೂರ, ಶಶಿಲ್ ನಮೋಶಿ ಮತ್ತು ಹನುಮಂತ ನಿರಾಣಿ ಅವರು, ಸದನದಲ್ಲಿ ಈ ವಿಷಯವನ್ನು ಪ್ರಸ್ತಾಪಿಸುವುದಾಗಿ, ತಿಳಿಸಿದರು.

<><><>

ಆಲಮಟ್ಟಿ–ಹುಣಸಗಿ–ಯಾದಗಿರಿ ಮಾರ್ಗವಾಗಿ, ರೈಲು ಸಂಪರ್ಕ ಕಲ್ಪಿಸುವ ಕುರಿತು, ರಾಯಚೂರು–ಯಾದಗಿರಿ ಸಂಸದ ಜಿ.ಕುಮಾರ ನಾಯಕ್, ಕೇಂದ್ರ ರೇಲ್ವೆ ಖಾತೆ ಸಚಿವ ಅಶ್ವಿನಿ ವೈಷ್ಣವ್ ಅವರೊಂದಿಗೆ, ವಿಸ್ತೃತ ಚರ್ಚೆ ನಡೆಸಿದರು.

ಬ್ರಿಟಿಷ್ ಆಳ್ವಿಕೆಯ ಭಾರತದಲ್ಲಿ, ಆಲಮಟ್ಟಿ–ಹುಣಸಗಿ–ಯಾದಗಿರಿ ರೈಲು ಮಾರ್ಗಕ್ಕೆ ನೀಲನಕ್ಷೆ ರೂಪುಗೊಂಡಿತ್ತು. ವಿಜಯಪುರ ಮತ್ತು ಯಾದಗಿರಿ ನಡುವೆ, ಪ್ರಸ್ತುತ ರೈಲು ಮಾರ್ಗದ ದೂರ, 338 ಕಿಲೋ ಮೀಟರ್‌ಗಳಷ್ಟಿದೆ. ಹೊಸ ರೈಲು ಮಾರ್ಗ ಅನುಷ್ಠಾನಗೊಂಡರೆ, 170 ಕಿಲೋ ಮೀಟರ್‌ಗಳಷ್ಟು ಕಡಿಮೆಯಾಗಲಿದೆ. ವ್ಯಾಪಾರ, ವಾಣಿಜ್ಯ ಮತ್ತು ಪ್ರವಾಸೋದ್ಯಮಕ್ಕೆ ಉತ್ತೇಜನ ದೊರೆಯಲಿದೆ. ಒಳನಾಡು ಮೀನು ಸಾಕಾಣಿಕೆಯಲ್ಲಿ ಹುಣಸಗಿ, ಸುರಪುರ, ಯಾದಗಿರಿ ಮುಂಚೂಣಿಯಲ್ಲಿವೆ ಎಂದು ಅವರು, ಸಚಿವರಿಗೆ ಮನವಿ ಮಾಡಿದ್ದಾರೆ.

<><><>

ಮಂಡ್ಯದಲ್ಲಿ ಇದೇ 20 ರಿಂದ, ಮೂರು ದಿನಗಳ ಕಾಲ ಆಯೋಜಿತ, 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ, ಭರದ ಸಿದ್ಧತೆಗಳನ್ನು ಕೈಗೊಳ್ಳಲಾಗುತ್ತಿದೆ. ಸಮ್ಮೇಳನದ ಆಹ್ವಾನ ಪತ್ರಿಕೆಯನ್ನು ಕನ್ನಡ ಸಾಹಿತ್ಯ ಪರಿಷತ್ ರಾಜ್ಯಾಧ್ಯಕ್ಷ ಮಹೇಶ ಜೋಶಿ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ ನೇತೃತ್ವದ, ಮಂಡ್ಯ ಜಿಲ್ಲಾಡಳಿತದ ನಿಯೋಗ, ಬೆಳಗಾವಿಯ ಸುವರ್ಣಸೌಧದಲ್ಲಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಅವರಿಗೆ, ಆಹ್ವಾನ ಪತ್ರಿಕೆ ನೀಡಿ, ಸಮ್ಮೇಳನಕ್ಕೆ ಆಹ್ವಾನಿಸಿತು.

<><><>

25ನೇ ವರ್ಷದ, ದತ್ತ ಜಯಂತಿ ಕಾರ್ಯಕ್ರಮದ ಹಿನ್ನೆಲೆ, ಚಿಕ್ಕಮಗಳೂರು ನಗರದಲ್ಲಿ ಇಂದು ಬೃಹತ್ ಶೋಭಾ ಯಾತ್ರೆ ನಡೆಯಲಿದೆ. ನಾಳೆ ಶನಿವಾರ, ದತ್ತ ಪೀಠದಲ್ಲಿ, ಶ್ರೀ ದತ್ತ ಜಯಂತಿ ಕಾರ್ಯಕ್ರಮ ಆಯೋಜಿತವಾಗಿದೆ.

<><><>

ತಮಿಳುನಾಡು ಸರ್ಕಾರ 2024ನೇ ಸಾಲಿನ ಚೊಚ್ಚಲ ‘ವೈಕಂ’ ಪ್ರಶಸ್ತಿಯನ್ನು ಸಾಹಿತಿ ದೇವನೂರು ಮಹಾದೇವ ಅವರಿಗೆ, ಕೇರಳದ ವೈಕಂನಲ್ಲಿ ಪ್ರದಾನ ಮಾಡಿ, ಗೌರವಿಸಿದರು.

ದೇವನೂರು ಮಹಾದೇವ ಅವರು ಸ್ಟಾಲಿನ್ ಅವರಿಗೆ ತಮಿಳು ಮತ್ತು ಕನ್ನಡದ ಪುಸ್ತಕಗಳನ್ನು ಹಾಗೂ ಪಿಣರಾಯಿ ವಿಜಯನ್ ಅವರಿಗೆ ಮಲಯಾಳ ಮತ್ತು ಕನ್ನಡ ಪುಸ್ತಕಗಳನ್ನು ಉಡುಗೊರೆಯಾಗಿ ನೀಡಿದರು.

<><><>

ಧಾರವಾಡದ ಚಿಲಿಪಿಲಿ ಸಂಗೀತ ಸಾಂಸ್ಕೃತಿಕ ಕಲಾ ಅಕಾದೆಮಿ, ಪಂಡಿತ ರವಿ ಕೂಡ್ಲಿಗಿ ಅವರ 10ನೇ ಪುಣ್ಯಸ್ಮರಣೆ ಅಂಗವಾಗಿ, ಖ್ಯಾತ ತಬಲಾ ವಾದಕ ಬೆಂಗಳೂರಿನ ಪಂಡಿತ ರವೀಂದ್ರ ಯಾವಗಲ್ ಅವರಿಗೆ, 2024ನೇ ಸಾಲಿನ ಪಂಡಿತ ರವಿ ಕೂಡ್ಲಿಗಿ ಪ್ರಶಸ್ತಿ ಪ್ರಕಟಿಸಿದೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ 1 ಗಂಟೆ 10 ನಿಮಿಷಕ್ಕೆ..